# ಅಚ್ಚರಿಯ ನೊಬೆಲ್ ಆಯ್ಕೆ



2016ರ ಸಾಹಿತ್ಯದ ನೊಬೆಲ್ ಪ್ರಶಸ್ತಿ ಅಮೆರಿಕದ ಗಾಯಕ, ಗೀತ ರಚನೆಕಾರ, ಚಿತ್ರ ಕಲಾವಿದ– ಬಾಬ್ ಡಿಲನ್ ಪಾಲಾಗಿದೆ. ಈ ಸುದ್ದಿ ಓದಿ ಸಾಹಿತ್ಯ ಕ್ಷೇತ್ರ ಮಾತ್ರವಲ್ಲ, ಸಂಗೀತ ಕ್ಷೇತ್ರದ ದಿಗ್ಗಜರೂ ಮೂಗಿನ ಮೇಲೆ ಬೆರಳಿಟ್ಟಿದ್ದಾರೆ. ವಾಸ್ತವವಾಗಿ ಪ್ರಶಸ್ತಿ ಆಯ್ಕೆ ಮಾಡುವ ಮುಂಚೆ ಆಯ್ಕೆ ಸಮಿತಿಯ ಮುಂದೆ ಬಾಬ್ ಹೆಸರೇ ಇರಲಿಲ್ಲ. ನೊಬೆಲ್ ಆಯ್ಕೆ ಸಮಿತಿಯ ಪರಿಗಣನೆಗೆ ಅರ್ಹವಾಗಿದ್ದ, ಆದರೆ ಪರಿಗಣಿಸದಿದ್ದ ಹತ್ತು ಪ್ರಮುಖರ ಹೆಸರುಗಳ ಮಾಧ್ಯಮ ಚರ್ಚೆಯಲ್ಲಿ ಮಾತ್ರ ಬಾಬ್ ಡಿಲನ್ ಹೆಸರು ಬಂದಿತ್ತು. ಆದರೆ ಅದು ಸಾಹಿತ್ಯಕ್ಕಿಂತ ಹೆಚ್ಚಾಗಿ ಶಾಂತಿಯ ಕ್ಷೇತ್ರಕ್ಕೆ ಸಂಬಂಧಿಸಿತ್ತು. ಈಗ ನೋಡಿದರೆ ಸಾಹಿತ್ಯ ಕ್ಷೇತ್ರದ ನೊಬೆಲ್ ಪ್ರಶಸ್ತಿ ಡಿಲನ್ ಮುಡಿಗೇರಿದೆ.

ಹೀಗೆಂದಾಕ್ಷಣ ಬಾಬ್ ಡಿಲನ್ ಕೊಡುಗೆ ಏನೂ ಇಲ್ಲ ಎನ್ನಲಾಗದು. ಈಗ 75ರ ಹರೆಯದ ಡಿಲನ್ (ಬರ್ತ್‌ಡೇ 24–5–1941), ಕಳೆದ ಶತಮಾನದ 60ರ ದಶಕದಿಂದಲೇ ಸಂಗೀತಪ್ರಿಯರ ಮೇಲೆ ಮೋಡಿ ಮಾಡಿದ ಹೆಸರು. ಹೋರಾಟದ ಹಾಡುಗಳ ಮೂಲಕ ಬೀದಿಹೋರಾಟಕ್ಕೆ ಕಾವು ತುಂಬಿದ ಗಾಯಕನೀತ. ತಾನೇ ಬರೆದ ಹಾಡುಗಳನ್ನು ತನ್ನ ಅಷ್ಟೇನೂ ಸುಶ್ರಾವ್ಯವಲ್ಲದ ಕಂಠದ ಮೂಲಕ ವೇದಿಕೆಯಲ್ಲಿ ಪ್ರಸ್ತುತ ಪಡಿಸುತ್ತಿದ್ದ ಈತ. ಆ ಮೂಲಕ ಶೋಷಿತ ಜನರಲ್ಲಿ ಹೋರಾಟದ ಕೆಚ್ಚನ್ನು ಬಡಿದೆಬ್ಬಿಸಿದ್ದು ಸುಳ್ಳಲ್ಲ. ಸರಳ ವಾಕ್ಯಗಳು, ಜಾನಪದದ ನೆರಳು, ನೇರ ಉಪಮೆಗಳು, ಸಾಮಾಜಿಕ ಎಚ್ಚರ, ಮಾನವೀಯತೆಯ ತುಡಿತ ಎಲ್ಲದರ ಮಿಶ್ರಣವಾಗಿದ್ದ ಈತನ ಹಾಡುಗಳು, ಅಮೆರಿಕ ದೈತ್ಯ ಶಕ್ತಿಯಾಗಿ ಎದ್ದೇಳುತ್ತಿದ್ದ ಸಂದರ್ಭದಲ್ಲಿ ಅಧಿಕಾರಸ್ಥರಿಗೆ ಕಿರಿಕಿರಿ ಉಂಟು ಮಾಡಿದ್ದೂ ನಿಜ. ವಿಯೆಟ್ನಾಂ ಜತೆ ಅನಗತ್ಯ ಯುದ್ಧಕ್ಕೆ ಇಳಿದಿದ್ದ ಅಮೆರಿಕ, ಶಸ್ತ್ರಾಸ್ತ್ರಗಳ ಮದದಿಂದ ಕೊಬ್ಬಿದ್ದ ಕಾಲದಲ್ಲಿ ಬಾಬ್ ಡಿಲನ್ ಬರೆದ ಮತ್ತು ಹಾಡಿದ ಹಾಡುಗಳು ಅಮೆರಿಕನ್ನರ ಮಾನವೀಯ ಗುಣಗಳಿಗೆ ಪ್ರಚೋದನೆ ನೀಡಿದ್ದು ಸುಳ್ಳಲ್ಲ.

ಡಿಲನ್ ಜನಪ್ರಿಯತೆಯ ತುತ್ತತುದಿಗೇರಿದ್ದ ಸಂದರ್ಭದಲ್ಲಿ ಗಾಯನ ಲೋಕವು ಆ್ಯಂಪ್ಲಿಫೈರ್, ಮೈಕ್ರೊಫೋನ್, ರೆಕಾರ್ಡಿಂಗ್ ಸ್ಟುಡಿಯೊ, ರೇಡಿಯೊ ಮುಂತಾದ ಹೊಸ ಆವಿಷ್ಕಾರಗಳ ಹೊಸ್ತಿಲಲ್ಲಿತ್ತು. ಇವೆಲ್ಲವನ್ನೂ ಡಿಲನ್ ಯಶಸ್ವಿಯಾಗಿ ಬಳಸಿಕೊಂಡರು. ಸಾಹಿತ್ಯದ ನೊಬೆಲ್ ಪ್ರಶಸ್ತಿಯನ್ನು ಘೋಷಿಸಿದ ನೊಬೆಲ್ ಆಯ್ಕೆ ಸಮಿತಿಯು, 'ಅಮೆರಿಕದ ಶ್ರೇಷ್ಠ ಹಾಡುಗಳ ಪರಂಪರೆಯೊಳಗೇ ನಡೆಸಿದ ಹೊಸ ಕಾವ್ಯಾತ್ಮಕ ಅಭಿವ್ಯಕ್ತಿಗಾಗಿ ಡಿಲನ್‌ಗೆ ಈ ಪ್ರಶಸ್ತಿ ಸಂದಿದೆ' ಎಂದು ಪ್ರಕಟಿಸಿದೆ. ಹಾಗೆ ನೋಡಿದರೆ ಈತ ರಾಕ್ ಆ್ಯಂಡ್ ರೋಲ್‌ನ ಅತ್ಯುತ್ತಮ ಮಾದರಿಯೂ ಆಗಿರಲಿಲ್ಲ. ಗೀತಸಾಹಿತ್ಯದಲ್ಲಿ ಅಪೂರ್ವ ರೂಪಕಗಳ ಬೆನ್ನು ಹತ್ತಲಿಲ್ಲ. ಶಾಸ್ತ್ರೀಯ ಸಾಹಿತ್ಯದ ಗಹನ ಅಧ್ಯಯನ ಮಾಡಲಿಲ್ಲ. ಆದರೂ ಈತನ ಸಾಹಿತ್ಯಕ್ಕೆ ನೊಬೆಲ್ ಸಂದಿದೆ. 'ಎಲ್ಲ ಧ್ವನಿಗಳಿಗಿಂತ, ಎಲ್ಲ ಮಾರ್ಗಗಳಿಗಿಂತ ಭಿನ್ನ ದಾರಿ ಹಿಡಿದದ್ದೇ ಈತನ ಹೆಗ್ಗಳಿಕೆ' ಎಂದು ನೊಬೆಲ್ ಸಮಿತಿ ತನ್ನ ನಿರ್ಧಾರಕ್ಕೆ ಕಾರಣ ನೀಡಿದೆ.

ಹತ್ತು ವರ್ಷಗಳ ಹಿಂದೆ ಸಂದರ್ಶನವೊಂದರಲ್ಲಿ ಡಿಲನ್ ಹೇಳಿದ್ದು– 'ಹಾಡುಗಳೇ ಧ್ಯಾನ ನನಗೆ. ಯಾರ ಜತೆಗೋ ಮಾತನಾಡುತ್ತಿರುವಾಗ ನನ್ನ ತಲೆಯೊಳಗೆ ಇನ್ಯಾವುದೋ ಖ್ಯಾತನಾಮರ ಹಾಡು ಸುತ್ತುತ್ತಿರುತ್ತದೆ. ಅಲ್ಲಿಂದ ಒಂದು ಶಬ್ದ ಛಂಗನೆ ಜಿಗಿದು ನನ್ನದೇ ಆದ ಇನ್ನೊಂದು ಕವಿತೆ ಹುಟ್ಟುತ್ತದೆ. ಜನ ನಾನು ಅವರ ಜತೆ ಮಾತನಾಡುತ್ತಿದ್ದೇನೆ ಎಂದು ಭಾವಿಸುತ್ತಾರೆ. ಆದರೆ ನಾನು ನನ್ನದೇ ಆದ ಧ್ಯಾನ ಪ್ರಪಂಚದಲ್ಲಿರುತ್ತೇನೆ. ಪ್ರಯಾಣ ಮಾಡುವಾಗಲೂ ಹೀಗೆಯೇ ನನ್ನ ಹಾಡುಗಳು ಹುಟ್ಟುತ್ತವೆ.'

ಡಿಲನ್ ಅವರ 'ಉಗುರು ಬೆಚ್ಚಗಿನ ರಕ್ತದ ಹಾಡು'ಗಳು ಕಳೆದ 60 ವರ್ಷಗಳಿಂದ ಅಮೆರಿಕನ್ನರ ಸಾಮಾಜಿಕ ಎಚ್ಚರವನ್ನು ಚಿವುಟುತ್ತಲೇ ಇದೆ ಎನ್ನುವುದು ನಿಜ. ಇಲ್ಲವಾದಲ್ಲಿ ಈಗ ಡೊನಾಲ್ಡ್ ಟ್ರಂಪ್ ಅಲೆಯ ಹೊತ್ತಲ್ಲಿ, ಸಾವಿರಾರು ಆಫ್ರೊ ಅಮೆರಿಕನ್ನರು ತಮ್ಮ ಮೇಲಾಗುತ್ತಿರುವ ದೌರ್ಜನ್ಯಕ್ಕೆ ಸಂಘಟಿತ ಪ್ರತಿಭಟನೆ ವ್ಯಕ್ತಪಡಿಸುತ್ತಿರುವ ಹೊತ್ತಿನಲ್ಲಿ ಹೀಗೆ ಏಕಾಏಕಿಯಾಗಿ ನೊಬೆಲ್ ಸಮಿತಿ ಬಾಬ್ ಡಿಲನ್‌ರನ್ನು ನೆನಪಿಸಿಕೊಳ್ಳುತ್ತಿರಲಿಲ್ಲವೇನೊ?

ಪಾಪ್ ಸಂಸ್ಕೃತಿಗೆ ಪ್ರತಿಸಂಸ್ಕೃತಿಯನ್ನು ರೂಪಿಸುತ್ತಲೇ ಜನಪ್ರಿಯರಾದ ಈತ, ಹಲವಾರು ಅಮೆರಿಕನ್ ಗೀತಸಾಹಿತಿಗಳನ್ನು ಪ್ರಭಾವಿಸಿದ್ದಾರೆ. ಇಂಗ್ಲಿಷ್, ಐರಿಶ್ ಮತ್ತು ಸ್ಕಾಟಿಷ್ ಜಾನಪದಗಳಿಂದಲೂ ಸಾಕಷ್ಟು ಕಡ ಪಡೆದುಕೊಂಡು ಬರೆದ ಹಾಡುಗಳು ಯುವಜನರನ್ನು ವಿಶೇಷವಾಗಿ ಸೆಳೆದವು. ಗಿಟಾರ್, ಕೀಬೋರ್ಡ್ ಮತ್ತು ಹಾರ್ಮೋನಿಕಗಳನ್ನು ನುಡಿಸುತ್ತಿದ್ದ ಡಿಲನ್, 80ರ ದಶಕದಲ್ಲಿ ಆರಂಭಿಸಿದ 'ನೆವರ್ ಎಂಡಿಂಗ್ ಟೂರ್' ಹೆಸರಿನ ವಿಶ್ವಪ್ರವಾಸ ಹೆಸರಿಗೆ ತಕ್ಕಂತೆ ಈಗಲೂ ಮುಂದುವರಿದಿದೆ. ರೆಕಾರ್ಡಿಂಗ್ ಆರ್ಟಿಸ್ಟ್ ಮತ್ತು ಸ್ಟೇಜ್ ಷೋ ಮ್ಯಾನ್ ಆಗಿಯೂ ಡಿಲನ್ ಜನಪ್ರಿಯರಾದರೂ, ಆತ ಬರೆದ ಹಾಡುಗಳೇ ಹೆಚ್ಚು ಹೆಸರುವಾಸಿ.

ಡ್ರಾಯಿಂಗ್ ಮತ್ತು ಪೇಂಟಿಂಗ್ಸ್ ಬಗ್ಗೆ ಆರು ಪುಸ್ತಕಗಳನ್ನು ಪ್ರಕಟಿಸಿರುವ ಡಿಲನ್ ಅವರ ಚಿತ್ರಗಳು ಜಗತ್ತಿನ ಪ್ರಮುಖ ಗ್ಯಾಲರಿಗಳಲ್ಲಿ ಪ್ರದರ್ಶನ ಕಂಡಿವೆ. ಸಂಗೀತಗಾರರಾಗಿ 10 ಕೋಟಿ ರೆಕಾರ್ಡ್ಸ್‌ಗಳನ್ನು ಮಾರಾಟ ಮಾಡಿರುವ ದಾಖಲೆಯೂ ಇದೆ. 11 ಜರ್ಮನಿ ಪ್ರಶಸ್ತಿಗಳು, ಒಂದು ಗೋಲ್ಡನ್ ಗ್ಲೋಬ್ ಪ್ರಶಸ್ತಿ ಮತ್ತು ಆಸ್ಕರ್ ಪ್ರಶಸ್ತಿಯೂ ಈತನ ಹೆಮ್ಮೆ. ಆಸ್ಕರ್ ಮತ್ತು ನೊಬೆಲ್ ಎರಡೂ ಪ್ರಶಸ್ತಿಗಳನ್ನು ಗೆದ್ದ ಎರಡನೇ ವ್ಯಕ್ತಿ ಡಿಲನ್. (ಮೊದಲನೆಯವರು ಜಾರ್ಜ್ ಬರ್ನಾರ್ಡ್ ಷಾ.) 2008ರಲ್ಲಿ ಪುಲಿಟ್ಜರ್ ಪ್ರಶಸ್ತಿ ಸಮಿತಿಯೂ ವಿಶೇಷ ಪ್ರಶಸ್ತಿಯನ್ನು ಪ್ರಕಟಿಸಿತ್ತು. ಅಮೆರಿಕ ಅಧ್ಯಕ್ಷರ ಸ್ವಾತಂತ್ರ್ಯ ಪದಕವನ್ನೂ 2012ರಲ್ಲಿ ಪಡೆದುಕೊಂಡಿದ್ದಾರೆ.

Printed and Published by B.A. Ravi on behalf of The Printers (Mysore) Private Ltd. Printed at M/s Geetanjali Graphics, # B-71, New No. 84, KSSIDC, Indl Estate, 6th Block, Rajajinagar, Bengaluru- 560010 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 2588 0000, Fax: 25880618, Editorial:25880619,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65